ಕ್ರಮ ಕೂಡ ತೆಗೆದುಕೊಂಡಿದ್ದೇನೆ. ಮತ್ತೆ ನಾನು ಗುಲ್ಬರ್ಗಕ್ಕೆ ಹೋಗಿದ್ದಾಗಲೂ ಕೂಡ ಜಿಲ್ಲಾಧಿಕಾರಿಗಳ ಸಭೆ ಕರೆದಿದ್ದಾಗ ನಮ್ಮ ಎಲ್ಲ ಶಾಸಕರು ಆ ಒಂದು ಸಭೆಗೆ ಬಂದಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಅವರ ಸಲಹೆಗಳನ್ನು ತೆಗೆದುಕೊಂಡು ಅದರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ಕೂಡ ಮಾಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಒಂದು ಕಾಯಿಲೆ ಸೊಳ್ಳೆಯಿಂದ ಬರುತ್ತದೆಂದು ಅವರು ಹೇಳಿದರು. ಆದ್ದರಿಂದ ಆ ಸೊಳ್ಳೆ ನಿಯಂತ್ರಣ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಉಪಾಧ್ಯಕ್ಷರು : ಫಾಗಿಂಗ್ ಮೆಷಿನ್ ಖರೀದಿ ಮಾಡಿದ್ದು, ಎಲ್ಲ ಜಿಲ್ಲೆಗಳಿಗೆ ಒಂದೊಂದು ಕೊಡುತ್ತೇವೆಂದು ಈಗಾಗಲೇ ಅವರು ಹೇಳಿದ್ದಾರೆ.

ಶ್ರೀ ಆರ್. ಅಶೋಕ್ : ಫಾಗಿಂಗ್ ಮಾಡುವುದರಿಂದ ಇದನ್ನು ತಡೆಯಬಹುದು. ಹಳ್ಳಿ ಜನರಿಗೆ ಇದರ ಬಗ್ಗೆ ನಾವು ಕನ್ವಿನ್ಸ್ ಮಾಡುತ್ತಿದ್ದೇವೆ. ಇವತ್ತಿನ ದಿವಸ ಫಾಗಿಂಗ್ ಕೆಲಸವನ್ನು ಹೊರಗಡೆ ಮಾತ್ರ ಮಾಡುತ್ತಿದ್ದೇವೆ. ಆದರೆ, ಇದನ್ನು ಮನೆಯೊಳಗಡೆ ಕೂಡ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಇದು ಬಹಳ ಮುಖ್ಯವಾಗಿದೆ. ಆದರೆ ಮನೆಯೊಳಗಡೆ ಮಾಡುವುದಕ್ಕೆ ಸ್ವಲ್ಪ ಗಲಾಟೆ ಮಾಡುತ್ತಿದ್ದಾರೆ. ಆದ್ದರಿಂದ ಹಳ್ಳಿ ಜನರಿಗೆ ಇದರ ಬಗ್ಗೆ ನಾವು ಕನ್ವಿನ್ಸ್ ಮಾಡುತ್ತಿದ್ದೇವೆ. ಮನೆ ಒಳಗಡೆ ಮಾಡಿದರೆ ಕೋಳಿ, ಹಸು ಸತ್ತು ಹೋಗುತ್ತವೆ ಎಂಬ ಆತಂಕ ಅವರಲ್ಲಿದೆ. ಆದ್ದರಿಂದ ಈ ರೀತಿ ಏನು ಆಗುವುದಿಲ್ಲವೆಂದು ನಮ್ಮ ಆರೋಗ್ಯಾಧಿಕಾರಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹೋಗಿ ಹೇಳಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ.

(ಆ) ಮೈಸೂರು ಮುಕ್ತ ವಿಶ್ವವಿದ್ಯಾಲಯದ ತಾತ್ಕಾಲಿಕ ನೌಕರರಿಗೆ ಸಂಬಳ ಜಾಸ್ತಿ ಕೊಡಲು ಬಿಒಎಂ ತೀರ್ಮಾನ ಜಾರಿ ಮಾಡುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಇದೊಂದು ಬಹಳ ಗಂಭೀರವಾದ ವಿಚಾರವಾಗಿದೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಸುಮಾರು 360 ಜನ ತಾತ್ಕಾಲಿಕ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅಂದರೆ, ಇವರು ಸುಮಾರು 10 ರಿಂದ 12 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೇವಲ ಎರಡೂವರೆ ಸಾವಿರ ರೂಪಾಯಿ ಮಾತ್ರ ಸಂಬಳ ಕೊಡುತ್ತಿದ್ದಾರೆ. ಐದು ತಿಂಗಳ ಹಿಂದೆ ನಾವು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಸಭೆಯಲ್ಲಿ ತೀರ್ಮಾನ ಮಾಡಿ, ಅವರವರ ಕೆಲಸದ ಪ್ರಕಾರ ಅವರಿಗೆ ಕೊಡುವ ವೇಜಸ್ ಜಾಸ್ತಿ ಮಾಡಬೇಕೆಂಬ ತೀರ್ಮಾನವನ್ನು ನಾವು ಮಾಡಿದೆವು. ಮತ್ತೆ ಇದಕ್ಕೆ ಆಗತಕ್ಕಂಥ ಹಣವನ್ನು ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದಲೇ ಭರಿಸಬೇಕೆಂದು ಹೇಳಲಾಗಿತ್ತು. ಅಂದರೆ ಅವರಲ್ಲಿ 40 ಕೋಟಿ ರೂಪಾಯಿ ಫಿಕ್ಸ್‌ಡ್ ಡೆಪಾಸಿಟ್ ಇದೆ. ಈ ಒಂದು ಹಣದಿಂದ ಬರತಕ್ಕಂಥ ಬಡ್ಡಿ

ಹಣದಿಂದಲೇ ಇವರಿಗೆಲ್ಲಾ ಹಣ ಕೊಡಬಹುದೆಂದು ಹೇಳಲಾಗಿತ್ತು. ಇವರು ಅಲ್ಲಿ ಹಗಲು ರಾತ್ರಿ ಕೆಲಸ ಮಾಡುತ್ತಾರೆ. ಇವರು ಇಲ್ಲದೆ ಇದ್ದರೆ ಮೈಸೂರು ಮುಕ್ತ ವಿಶ್ವವಿದ್ಯಾಲಯ ನಡೆಯುವುದಿಲ್ಲ. ಏಕೆಂದರೆ, ಅದು ರೆಗ್ಯುಲರ್ ಯೂನಿವರ್ಸಿಟಿಯಲ್ಲ. ಲೆಸೆನ್ಸ್ ಪೋಸ್ಟ್ ಮಾಡುವುದರಿಂದ ಹಿಡಿದು ಪ್ರತಿಯೊಂದು ಕೆಲಸವನ್ನು ಅವರೇ ಮಾಡಬೇಕಾಗಿದೆ. ಅಲ್ಲಿ ಹೆಚ್ಚಿನ ಮೆಜಾರಿಟಿ ಜನ ತಾತ್ಕಾಲಿಕ ನೌಕರರು ಇದ್ದಾರೆ. ಅವರಿಗೆ ಜಾಸ್ತಿ ಸಂಬಳ ಕೊಡಬೇಕೆಂದು ನಾವು ಬೋರ್ಡ್‌ನಲ್ಲಿ ಸರ್ವಾನುಮತದ ತೀರ್ಮಾನ ತೆಗೆದುಕೊಂಡಿದ್ದೆವು. ನಮ್ಮದೇ ಹಣದಿಂದ ಕೊಡುವುದರಿಂದ ಸರ್ಕಾರಕ್ಕೆ ಇದರಿಂದ ಏನು ಹೊರೆಯಾಗುವುದಿಲ್ಲ ಎಂದು ಈ ರೀತಿಯಾದ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಇಷ್ಟೆಲ್ಲಾ ತೀರ್ಮಾನ ಆದರೂ ಕೂಡ ಅಲ್ಲಿರತಕ್ಕಂಥ ವೈಸ್ ಚಾನ್ಸೆಲರ್ ಮತ್ತು ಇಲ್ಲಿರತಕ್ಕಂಥ ಕೆಲವು ಅಧಿಕಾರಿಗಳು ಸೇರಿ ಆ ಒಂದು ತೀರ್ಮಾನವನ್ನು ಜಾರಿ ಮಾಡದ ಹಾಗೆ ಮಾಡಿದ್ದಾರೆ. ಕರ್ನಾಟಕ ಓಪನ್ ಯೂನಿವರ್ಸಿಟಿ ಆಕ್ಟ್ ಪ್ರಕಾರ BOM is the supreme authority. They can take decisions and they can be implemented. Nobody can question. Only the Chancellor can question. ಅದನ್ನು ಚಾನ್ಸೆಲರ್ ಏನಾದರೂ ಕ್ಯಾನ್ಸಲ್ ಮಾಡಬೇಕಾದರೆ under Article 9, he has to give a notice to us. ಅದನ್ನು ಚಾನ್ಸೆಲರ್ ಏನಾದರೂ ವಿತೆಲ್ಡ್ ಮಾಡಬೇಕಾದರೆ ನಮಗೆ ನೋಟೀಸ್ ಕೊಡಬೇಕಾಗುತ್ತದೆ. ಅಂಡರ್ ಸೆಕ್ಷನ್ 9 ಪ್ರಕಾರ ಏನು ಹೇಳಲಾಗಿದೆ ಎಂದರೆ,

> "Without prejudice to the foregoing provision of this Section, the Chancellor may, by an order in writing, annual any proceedings of the University which is not in conformity with this Act, the statutes or Ordinance,
>
> Provided that before making any such order, he shall call upon the University to show cause why such an order should not be made. If any cause is shown within a reasonable time, he shall consider the same.

ಇದು ಪ್ರಾವಿಷನ್‌ನಲ್ಲಿ ಆಕ್ಟ್‌ನಲ್ಲಿ ಇರತಕ್ಕಂಥದ್ದು. ಚಾನ್ಸಲರ್ ಇದು ಅನಲ್ ಮಾಡಿಲ್ಲ. ನಾವು ಮಾಡಿರತಕ್ಕಂಥ ತೀರ್ಮಾನವನ್ನು ಜಾರಿ ಮಾಡಬೇಕೆಂದು ಹೇಳಿ ಅವತ್ತು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಡಿ. ಮಂಜುನಾಥ್‌ರವರು ದಿನಾಂಕ: 19–5–2005 ರಂದು ಪತ್ರವನ್ನು ಬರೆದಿದ್ದಾರೆ. ಎಜುಕೇಶನ್ ಸೆಕ್ರೆಟರಿಯವರಿಗೆ, ಏನು ಪತ್ರವನ್ನು ಬರೆದಿದ್ದಾರೆಂದರೆ, ಕುವೆಂಪು ವಿಶ್ವವಿದ್ಯಾನಿಲಯ ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ನೌಕರರಿಗೆ ಗ್ರೇಡೆಡ್ ಪೇ ನೀಡಿದಂತೆ ತಮ್ಮ ವಿಶ್ವವಿದ್ಯಾನಿಲಯವು ಹಂಗಾಮಿ ನೌಕರರಿಗೆ ವಿಶ್ವವಿದ್ಯಾನಿಲಯದ ಅಂತರಿಕ ಮೂಲಗಳಿಂದ

ಭರಿಸಿ ಗ್ರೇಡೆಡ್ ಪೇ ನೀಡಲು ಅನುವಾಗುವಂತೆ ವ್ಯವಸ್ಥಾಪಕ ಮಂಡಳಿಯು ತೀರ್ಮಾನ ತೆಗೆದುಕೊಂಡಿದ್ದರು. ಸರ್ಕಾರ ಅನುಮೋದಿಸಬೇಕೆಂಬ ಕಾರಣದ ಮೇಲೆ ಅದನ್ನು ಇದುವರೆಗೆ ಅನುಮೋದಿಸಿರುವುದಿಲ್ಲ. ಹಂಗಾಮಿ ನೌಕರರನ್ನು ಖಾಯಂಗೊಳಿಸುವ ಸಂದರ್ಭ, ಹುದ್ದೆಗಳು ಮಂಜೂರಾತಿ ನಿಯಮಾವಳಿ ತಯಾರಿಸಿ ಸರ್ಕಾರಕ್ಕೆ ಕಳಿಸಿ ಹಲವಾರು ತಿಂಗಳುಗಳೆ ಕಳೆದಿದ್ದರು ಇದುವರೆಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಮೇಲ್ಕಂಡ ಬೇಡಿಕೆಗಳನ್ನು....

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ಶೂನ್ಯವೇಳೆ.

ಉಪಾಧ್ಯಕ್ಷರು : ಒಂದು ನಿಮಿಷ.

ಶ್ರೀ ಜಗದೀಶ್ ಶೆಟ್ಟರ್ : ಡಿಟೇಲ್ ಆದ ಮಾಹಿತಿ ಕೊಡಬೇಕು. ಶೂನ್ಯವೇಳೆಯಲ್ಲಿ ಅದು ಸಾಧ್ಯವಿಲ್ಲ.

ಉಪಾಧ್ಯಕ್ಷರು : ಎರಡು-ಮೂರು ನಿಮಿಷದಲ್ಲಿ ಎಲ್ಲವನ್ನು ಬ್ರೀಫ್ ಮಾಡಿದರೆ ಎಲ್ಲರಿಗೂ ಅರ್ಥವಾಗುತ್ತದೆ. ಕಾನೂನು ಅದು ಎಲ್ಲವನ್ನು ಇಟ್ಟುಕೊಂಡು ಬಿಟ್ಟರೆ ಕನ್‌ಫ್ಯೂಸ್ ಆಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳಿದ್ದು ಸರಿ ಇದೆ. ಅಲ್ಲಿ ಬಹಳ ಸಮಸ್ಯೆ ಇದೆ.

ಉಪಾಧ್ಯಕ್ಷರು : ಸಮಸ್ಯೆ ಏನು ಎನ್ನುವುದನ್ನು ಎರಡು ನಿಮಿಷದಲ್ಲಿ ಹೇಳಿದರೆ ಅವರಿಗೆ ಮತ್ತು ನಮಗೂ ಅರ್ಥವಾಗುತ್ತದೆ. ಏಕೆಂದರೆ ಆಕ್ಟ್ ಇಟ್ಟುಕೊಂಡು ಬಿಟ್ಟರೆ ಮತ್ತೆ ಕನ್‌ಫ್ಯೂಸ್ ಆಗಿಬಿಡುತ್ತದೆ. ಮಾನ್ಯ ಪುಟ್ಟೇಗೌಡರೆ ಒಂದು ನಿಮಿಷ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಮಾತನಾಡಬೇಡಿ ಎಂದು ಹೇಳುತ್ತಿಲ್ಲ ಮಾತನಾಡಲಿ, ಕುಳಿತುಕೊಳ್ಳಿ. ಅರ್ಥವಾಗುವಂತೆ ಎರಡು ನಿಮಿಷದಲ್ಲಿ ಬ್ರೀಫ್ ಮಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅರ್ಧ ಗಂಟೆ ಮುಕ್ಕಾಲು ಗಂಟೆ ಹೇಳುವಾಗ ಸುಮ್ಮನೆ ಇದ್ದೀರಿ.

ಉಪಾಧ್ಯಕ್ಷರು : ರಾಜ್ಯಕ್ಕೆ ಸಂಬಂಧಪಟ್ಟಂಥ ಸಮಸ್ಯೆ ಇದ್ದಾಗ ಕೊಡಲಾಗಿದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಕೇಳಿ ಉಪಾಧ್ಯಕ್ಷರೆ.

ಉಪಾಧ್ಯಕ್ಷರು : ನೀವು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 10 ಸಾವಿರ ಜನ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ ಇದು. ಅವರಿಗೆ ಲೆಸ್ಸೆನ್ಸ್ ಹೋಗಿಲ್ಲ.

ಉಪಾಧ್ಯಕ್ಷರು : ಹಾಗಾದರೆ ಇಂತಹ ಸಬ್ಜೆಕ್ಟ್‌ನ್ನು ಶೂನ್ಯವೇಳೆಯಲ್ಲಿ ಏಕೆ ತಂದಿರಿ ಎಂದು. ಬೇರೆ ರೂಪದಲ್ಲಿ ತರಬಹುದಾಗಿತ್ತು ಅಲ್ಲವೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮುಕ್ಕಾಲು ಗಂಟೆ ಭಾಷಣ ಹೊಡೆಯುವಾಗ ಏನು ಹೇಳುವುದಿಲ್ಲ.

ಉಪಾಧ್ಯಕ್ಷರು : ಬಹಳ ಇಂಪಾರ್ಟೆಂಟ್ ಇಷ್ಯೂ ಎಂದ ಮೇಲೆ ಅರ್ಧ ಗಂಟೆ ಅಥವಾ ಒಂದು ಗಂಟೆನೋ ಚರ್ಚೆಗೆ ಕೊಡಬಹುದಾಗಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇದು ಕಡೆಯ ದಿವಸ.

ಉಪಾಧ್ಯಕ್ಷರು : ಕೇಳಿ ಕೇಳಿ, ಬೇಗ ಮುಗಿಸಿ ಬಿಡಿ. ಕೇಳಬಾರದೆಂದು ನಾನು ನಿಮ್ಮನ್ನು ಕೇಳುತ್ತಿಲ್ಲ. ಬ್ರೀಫ್ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿವರವಾಗಿ ಹೇಳದಿದ್ದರೆ ಅವರಿಗೆ ಗೊತ್ತಾಗಬೇಕಲ್ಲವೆ?

ಉಪಾಧ್ಯಕ್ಷರು : ಸಮಸ್ಯೆಯನ್ನು ಹೇಳಿಬಿಡಿ, ಸಮಸ್ಯೆಗೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 360 ಜನ ಹಂಗಾಮಿ ನೌಕರರಿಗೆ ಕೂಲಿ ಜಾಸ್ತಿ ಕೊಡಬೇಕೆಂದು ಬಿಒಎಂ ಮಾಡಿರತಕ್ಕಂಥ ತೀರ್ಮಾನವನ್ನು ತಕ್ಷಣ ಸರ್ಕಾರ ಜಾರಿ ಮಾಡಿಸಬೇಕು. ನಮ್ಮದೇ ಹಣ, ಸರ್ಕಾರ ಏನು ಹಣವನ್ನು ಕೊಡಬೇಕಾಗಿಲ್ಲ. ಅದು ಯುನಿವರ್ಸಿಟಿಯ ಹಣ, ಆ ಹಣವನ್ನು ಅದು ಭರಿಸುತ್ತದೆ. ಅದರ ಬಗ್ಗೆ ಮಾಡಿರತಕ್ಕಂಥ ತೀರ್ಮಾನವನ್ನು ತಡೆಹಿಡಿಯಲಿಕ್ಕೆ ಅಧಿಕಾರ ಇಲ್ಲದೇ ಇದ್ದರೂ ಕೂಡ ಹಣಕಾಸು ಇಲಾಖೆ, ಶಿಕ್ಷಣ ಇಲಾಖೆ, ಇವರಿಗೆ ಯಾರಿಗೂ ಅಧಿಕಾರವಿಲ್ಲದಿದ್ದರೂ ಕೂಡ 5 ತಿಂಗಳುಗಳಿಂದ ತಡೆ ಹಿಡಿದಿರುವುದರಿಂದ 5 ತಿಂಗಳಿಂದ ನೌಕರರು ಮುಷ್ಕರ ಹೂಡಿದ್ದಾರೆ. ಇಡೀ ವಿಶ್ವವಿದ್ಯಾನಿಲಯದ ಅಡ್ಮಿನಿಸ್ಟ್ರೇಶನ್ ಸ್ಥಗಿತವಾಗಿದೆ. 10 ಸಾವಿರ ಜನ ವಿದ್ಯಾರ್ಥಿಗಳಿಗೆ ಇದುವರೆಗೆ ಲೆಸ್ಸನ್ಸ್ ಹೋಗಿರುವುದಿಲ್ಲ. ಕ್ವಶ್ಚನ್ ಪೇಪರ್ಸ್ ಹೋಗಿಲ್ಲ. ಪರೀಕ್ಷೆ ನಡೆಯುವುದಿಲ್ಲ. ಆ ಭಾಗದ ಶಾಸಕರಾದ ಶಂಕರಲಿಂಗೇಗೌಡರು ಇದ್ದಾರೆ. ಮಾನ್ಯ ಪುಟ್ಟೇಗೌಡರು ಇದ್ದಾರೆ. ಕಳೆದ 5 ತಿಂಗಳಿಂದ ಏನು ಸಮಸ್ಯೆಯಾಗಿದೆ ಕೇಳಿ. 5 ತಿಂಗಳಿನಿಂದ ಸರ್ಕಾರ.... ಆಗಿನ ಉನ್ನತ ಶಿಕ್ಷಣ ಸಚಿವರು ಮಧ್ಯೆ ಪ್ರವೇಶ ಮಾಡಿ ಕೊಡಬೇಕೆಂದು ಹೇಳಿ ರೈಟಿಂಗ್‌ನಲ್ಲಿ ಕೊಟ್ಟರು. ಆದರೂ ಆಗಲಿಲ್ಲ. ಮತ್ತೆ ಎರಡು-ಮೂರು ಸಲ ಮೀಟಿಂಗ್ ಮಾಡಿದರು ಈ ಸರ್ಕಾರ ಬಂದ ಮೇಲೆ, ಇದುವರೆಗೆ ಜಾರಿಯಾಗಲಿಲ್ಲ. ವಿಶ್ವವಿದ್ಯಾನಿಲಯ ಮುಚ್ಚತಕ್ಕಂಥ ಸ್ಥಿತಿಗೆ ಬಂದಿದೆ. ಅದನ್ನು ಈ ಸರ್ಕಾರ ತಕ್ಷಣ ಈ ದಿವಸವೇ ಆರ್ಡರ್ ಮಾಡಿ, ಬಿಒಎಂ ಏನು ತೀರ್ಮಾನ ಮಾಡಿದೆ ಆ ಹಣವನ್ನು ಅವರಿಗೆ ವೇಜೆಸ್ ಕೊಡಬೇಕೆಂದು ಹೇಳಿ ಆರ್ಡರ್ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಕೊನೆಯ ದಿನ, ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇದ್ದರು. ಬಾಬು ಜಗಜೀವನರಾಮ್ ಹಾಗೂ ಕುಂಬ್ಳೆಯವರಿಗೆ ಸನ್ಮಾನವನ್ನು ಮಾಡತಕ್ಕಂಥ ಸಂದರ್ಭದಲ್ಲಿ,

ಇವತ್ತು ಬೇಡ ನಾಳೆ ಉತ್ತರವನ್ನು ಕೊಡೋಣವೆಂದರು. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಸದನ ಇದೆ ಎಂದು ಗೊತ್ತಿಲ್ಲ. ವಿಧಾನ ಪರಿಷತ್ತಿನಲ್ಲಿದ್ದರೆ ಅದು ಬೇರೆ. ಇವತ್ತು ಮಾನ್ಯ ಈಶ್ವರಪ್ಪನವರು, ಜಗದೀಶ್ ಶೆಟ್ಟರ್‌ರವರು, ಡಿ.ಟಿ. ಜಯಕುಮಾರ್‌ರವರು ಇದ್ದಾರೆ. ಶೂನ್ಯವೇಳೆಯಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದು ಇದೆ. ಏಕೆ ಈ ತರಹ ಒಬ್ಬರು ಮಂತ್ರಿಗಳೇ ಇಲ್ಲ. ಇಂದು ಕೊನೆಯ ದಿವಸ, ಮಾನ್ಯ ಶ್ರೀರಾಮರೆಡ್ಡಿಯವರು 5 ತಿಂಗಳಿಂದ ಸಂಬಳ ಇಲ್ಲದಿರುವ ಶಿಕ್ಷಕರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಅವರು ಹೇಳಬೇಕು ಅಲ್ಲ. ಅದಕ್ಕೆ ಇವತ್ತು ಈ ರೀತಿಯಾದಂಥ ವರ್ತನೆ ಇದೆ. ಯಾರಿಗೂ ಶೋಭೆ ತರಕ್ಕಂಥದ್ದು ಅಲ್ಲ. ಇಂದು ಕೊನೆಯ ದಿನ ನಾವು ಯಾರಿಗೆ ಕೇಳಬೇಕು. ಇವತ್ತು ಸದನ ಏಕೆ ಇಡಬೇಕು. ಇವತ್ತು ಬಂದು ಕುಳಿತಿದ್ದೇವೆ. ನಾವು ಮೊನ್ನೆ ಭಟ್ಕಳ ಬಗ್ಗೆ ಪ್ರಶ್ನೆ ಕೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಒಂದು ಹೇಳಿಕೆ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಅವರಿಗೆ ಏನು ಕಾಳಜಿಯೆ ಇಲ್ಲ. ಈ ವರ್ತನೆ ಏನು ಇದೆ ಅಲ್ಲ, ಇದು ಸರ್ಕಾರ ನಡೆಸತಕ್ಕಂಥವರ ಸರಿಯಾದ ಲಕ್ಷಣವಲ್ಲ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ದಿವಸ ಸಮ್ಮೇಳನಕ್ಕೆ ಹೋದ ಕಾರಣ ಕಳಸಾ–ಬಂಡೂರಿ ಬಗ್ಗೆ ನಂತರ ಉತ್ತರ ಕೊಡುತ್ತಾರೆಂದರು. ಆದಕಾರಣ ನಾವು ಅವರಿಗೆ ಡೈರೆಕ್ಟಾಗಿ ಕೇಳಬೇಕೆಂದಾಗ, ತಾವು ನಂತರ ಉತ್ತರ ಕೊಡುತ್ತಾರೆಂದು ಹೇಳಿದಿರಿ ಒಳ್ಳೆಯದು. ಆದರೆ ಇವತ್ತು ನಿಮ್ಮ ಆಟಿಟ್ಯೂಡ್ ಬಗ್ಗೆ ನೀವು ಬೇರೆ ಏನು ಹೇಳುವುದು ಬೇಡ. ಬೇರೆಯವರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರೆ ನೀವು ಏಕೆ ಮೈಮೇಲೆ ಹಾಕಿಕೊಳ್ಳುತ್ತೀರಿ. ಇವತ್ತು ಅವರು ಇರಲೇಬೇಕು. ಇವತ್ತು ಶೂನ್ಯವೇಳೆಯಲ್ಲಿ 5–6 ಪ್ರಕರಣಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತೆ ಕೇಳಿರುತ್ತೇವೆ. ಈ ತರಹ ಪ್ರತಿಭಟನೆ ಏನಿದೆ, ನಾವು ಒಳಗೂ ಹೊರಗೂ ಹೋಗತಕ್ಕಂಥದ್ದು ಅಲ್ಲ. ಸರ್ಕಾರ ನಡೆಸತಕ್ಕಂಥದ್ದು ಅಲ್ಲ, ಕಾರ್ಯಕ್ರಮಗಳು ಇರುತ್ತವೆ. ನಾವು ಸರ್ಕಾರವನ್ನು ನಡೆಸಿರುತ್ತೇವೆ. ಏನೋ ಒಂದು ಅನಿವಾರ್ಯ ಇದ್ದ ಪಕ್ಷದಲ್ಲಿ ಮುಖ್ಯಮಂತ್ರಿಗಳು ಹೋಗಬೇಕಾಗುತ್ತದೆ. ಪ್ಯಾಲೇಸ್ ಗ್ರೌಂಡ್‌ನಲ್ಲಿ ಈಗ ಏನಿದೆ, ನಾಳೆ ಇಡಬಾರದಾಗಿತ್ತೆ? ಯಾವಾಗಲೂ ಸದನಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಬಹಳಷ್ಟು ಮಹತ್ವವಾದ ಸಭೆಗೆ ಹೋಗಿದ್ದಾರೆ. ಮಾನ್ಯ ರಾಷ್ಟ್ರಪತಿಗಳು ಬಂದಿದ್ದಾರೆಂದರೆ, that is a different matter. But this attitude is very bad.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಕೆಲವೊಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಇವತ್ತು ಯಾವ್ಯಾವ ಸಮಸ್ಯೆಗಳು ಬರುತ್ತವೆ. ಯಾವ್ಯಾವ ವಿಷಯಗಳು ಬರುತ್ತವೆ. ಆ ಪ್ರಶ್ನೆಗಳಿಗೆ ನಾವು ಸರ್ಕಾರದಿಂದ ಉತ್ತರವನ್ನು ಒದಗಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು

ಅವರು ಏನು ಹೇಳಬೇಕಾಗಿದೆ, ಅವರು ಬಂದು ಹೇಳುತ್ತಾರೆ, ಬರುತ್ತಾರೆ. ಈಗ ಕಾಲಿಂಗ್ ಅಟೇನ್‌ಷನ್ ಇದೆ. ಕೆಲವೊಂದು ಜೀರೋ ಅವರ್‌ನಲ್ಲಿ ಉತ್ತರವನ್ನು ಕೊಡುವಂಥವುಗಳು ಇವೆ. ಅದಕ್ಕೆ ಉತ್ತರಗಳು ರೆಡಿ ಇವೆ. ಮಾನ್ಯ ಶ್ರೀರಾಮರೆಡ್ಡಿಯವರು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕು ನಾವು ಅದನ್ನು ಮಾಡುತ್ತೇವೆ.

ಶ್ರೀ ಸಿ.ಎಸ್. ಪುಟ್ಟರಾಜು (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಿದ್ದಾರೆ. ಸನ್ಮಾನ್ಯ ಶ್ರೀರಾಮರೆಡ್ಡಿಯವರು ವಿಶ್ವವಿದ್ಯಾನಿಲಯ ನೌಕರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕಳೆದ 5 ತಿಂಗಳಿಂದ ಸತತವಾಗಿ ಮಂತ್ರಿಗಳು ವಿರೋಧ ಪಕ್ಷದ ನಾಯಕರುಗಳು ಎಲ್ಲರೂ ಗಮನ ಸೆಳೆದಿದ್ದಾರೆ. ಅಲ್ಲಿ ಅನ್ಯಾಯವಾಗಿದೆ, ಆ ನೌಕರರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಲಿಕ್ಕೆ 5 ತಿಂಗಳಿಂದ ಒಂದೇ ಒಂದು ಆದೇಶ ಹೊರಡಿಸಿ ಸರಿಪಡಿಸಿ ಎಂದರೆ ಸರ್ಕಾರದಿಂದ ಆಗಿಲ್ಲವೆಂದರೆ, ಅದನ್ನು ಹೇಳುವುದಕ್ಕಾಗುವುದಿಲ್ಲ. ಈಗಲಾದರೂ ಕೂಡ ಅವರು ಏನು ಹೇಳುತ್ತಿದ್ದಾರೆ. ನಾನು ಇರಬಹುದು, ಮಾನ್ಯ ಶಂಕರಲಿಂಗೇಗೌಡರು ಇರಬಹುದು, ಮಹದೇವ ಪ್ರಸಾದ್ ಇರಬಹುದು ನಾವೆಲ್ಲರೂ ಕೂಡ ಒಕ್ಕೊರಲಿನಿಂದ ನಾವು ಇದರ ಬಗ್ಗೆ ನಾವು ಒತ್ತಾಯ ಮಾಡುತ್ತೇವೆ. ಈ ದಿನವೆ ಅವರಿಗೆ ನ್ಯಾಯ ದೊರಕಿಸಿಕೊಡುವಂಥ ಕೆಲಸವನ್ನು ಮಾಡಿಕೊಡಬೇಕು. ಸನ್ಮಾನ್ಯ ಸಚಿವರು ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಚಿವರ ಜೊತೆಯಲ್ಲಿ ಮಾತನಾಡಿ ಆ ಮುಕ್ತವಿಶ್ವವಿದ್ಯಾನಿಲಯದಲ್ಲಿ ಏನು ಆಗುತ್ತಿದೆ, ಅನ್ಯಾಯವನ್ನು ಸರಿಪಡಿಸಲಿಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ಇದು ಅತೀ ತುರ್ತಾದಂಥ ವಿಚಾರ, ಅತಿ ಜರೂರಾದ ವಿಚಾರ, ನಿಜವಾಗಲೂ ಕೂಡ ಅನ್ಯಾಯವಾಗಿದೆ. ಅದಕ್ಕೆ ಸರ್ಕಾರ ಕೂಡಲೇ ಗಮನವನ್ನು ಹರಿಸಬೇಕು ಅದಕ್ಕೆ ಆದೇಶ ಹೊರಡಿಸಬೇಕೆಂದು ಹೇಳಿ ನಾವೆಲ್ಲರೂ ಕೂಡ ಒತ್ತಾಯವನ್ನು ಮಾಡುತ್ತಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉಪಾಧ್ಯಕ್ಷರೆ, ಸುಮಾರು 15 ವರ್ಷಗಳಿಂದ ಕೆಲಸವನ್ನು ಮಾಡಿದ್ದಾರೆ. ಎಷ್ಟೋ ಜನ ಸತ್ತು ಹೊಟ್ಟೆಗೆ ಇಲ್ಲದೆ ಹೋಗುತ್ತಿದ್ದಾರೆ. ಅಂತಹ ಒಂದು ಪರಿಸ್ಥಿತಿ ಇದೆ. ನಾನು ಆಡಳಿತ ಪಕ್ಷದಲ್ಲಿ ಇದ್ದುದರಿಂದ ಬಿಟ್ಟಿದ್ದೇನೆ. ಇಲ್ಲದಿದ್ದರೆ ನಾನು ಅಲ್ಲಿಯೆ ಮಲಗುತ್ತಿದ್ದೆ. ಅವರಿಗೆ ನ್ಯಾಯ ದೊರಕಿಸಿ ಕೊಡುವವರೆಗೆ ಮಲಗುತ್ತಿದ್ದೆ. ಆದ್ದರಿಂದ ಇದು ಭಾರಿ ಗಂಭೀರವಾದ ವಿಚಾರ ಇರುವುದರಿಂದ 5 ತಿಂಗಳಿಂದ ಅವರಿಗೆ ಅನ್ನ ಇಲ್ಲದೆ ಊಟ ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿದ್ದಾರೆ ಆ ನೌಕರರು. ದಯಮಾಡಿ ಇದನ್ನು ನೀವು ಸರಿ ಮಾಡಿಕೊಡಬೇಕು.

ಶ್ರೀ ಸುನೀತಾ ವೀರಪ್ಪಗೌಡ : ಮಾನ್ಯ ಉಪಾಧ್ಯಕ್ಷರೆ, ನಮಗೊಂದು ಅವಕಾಶವನ್ನು ಕೊಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಉಪಾಧ್ಯಕ್ಷರೆ, ಖಂಡಿತವಾಗಿ ನಾವು ಕೂಡ ಆ ಭಾಗದಲ್ಲಿ ಇರುವಂಥ ಶಾಸಕರು, ಬಹಳ ಗಂಭೀರವಾಗಿದೆ. ಹೆಂಗಸರು ಮಕ್ಕಳ ಸಮೇತ ಅಲ್ಲಿ ಊಟಕ್ಕೆ ಇಲ್ಲದೆ ಯುನಿವರ್ಸಿಟಿ ಎದುರುಗಡೆ ಸ್ಟ್ರೈಕ್ ಮಾಡುತ್ತಾ ಹೊರಗಡೆ ಕುಳಿತಿದ್ದಾರೆಂದರೆ, ಅಲ್ಲಿರುವ ವೈಸ್ ಚಾನ್ಸಲರ್ ಏನಿದ್ದಾರೆ ಅವರು ಅತ್ಯಂತ ಮಾನಾರ್ಪಿತರಂತೆ ನಡೆದುಕೊಳ್ಳುತ್ತಿದ್ದಾರೆ. ಯಾರೊ ಒಬ್ಬ ಹುಡುಗ ಸಾಯುವುದಕ್ಕೆ ಹೋಗಿ ನಿಮ್ಯಾನ್ಸ್‌ಗೆ ತಂದು ಸೇರಿಸಿದ್ದಾರೆ. ಒಂದು ವೆಹಿಕಲ್ ಕಳುಹಿಸುವಂಥ ಕನಿಷ್ಟ ಮಾನವೀಯತೆಯನ್ನು ತೋರಿಸಿಲ್ಲ. ಏನಾಗಿದೆ ಎಂದರೆ ವೈಸ್ ಚಾನ್ಸಲರ್‌ಗಳಿಗೆ ಒಂದು ಅವಧಿ ಬಿಟ್ಟು, ಎರಡನೇ ಅವಧಿಗೆ ಮಾಡಿದರೆ ಅಲ್ಲಿರುವ ನೌಕರರಿಗೆ ಅಲ್ಲಿರುವ ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಾರೆ. ದಯಮಾಡಿ ಎರಡನೇ ಸಲಕ್ಕೆ ಮುಂದುವರಿಸುವ ಪರಿಪಾಠವನ್ನು ಈ ಸರ್ಕಾರ ನಿಲ್ಲಿಸಬೇಕು. ಇದು ಗಂಭೀರವಾದ ವಿಚಾರ, ಕನಿಷ್ಟ ಅಲ್ಲಿ ಹೋಗಿ ನೋಡುವಂಥ ಕನಿಷ್ಟ ಸೌಜನ್ಯ, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹೋಗಿ ನೋಡಬೇಕು. ಪಾಪ ಧರ್ಮಸಿಂಗ್ ಸಾಹೇಬರು ಸರ್ಕಾರವನ್ನು ನಡೆಸಿದವರು, ಅವರಾದರೂ ಒಂದು ಸಲ ಹೋಗಿ ನೋಡಿದರೆ, ಆ ಹುಡುಗರಿಗೆ ನಾವು ಬದುಕಿ ಜೀವನ ಮಾಡಬಹುದು ಎನ್ನುವುದು ಗೊತ್ತಾಗುತ್ತದೆ. ಹೊಸದಾಗಿ ಸರ್ಕಾರದಿಂದ ಸ್ಯಾಲರಿಯನ್ನು ಕೊಡಬೇಕಾಗಿಲ್ಲ. ಆ ಯುನಿವರ್ಸಿಟಿಯವರ ದುಡ್ಡು ಇದೆ. ಆ ಯುನಿವರ್ಸಿಟಿಯ ನೌಕರರು ಕಷ್ಟಪಟ್ಟು ದುಡಿದಿರುವ ಕೋಟ್ಯಾಂತರ ರೂಪಾಯಿ ಇದೆ. ಅದರಲ್ಲಿಯೆ 5-6 ಸಾವಿರ ರೂಪಾಯಿಗಳ ಪೇಗ್ರೇಡ್ ಎಂದು ಮಾಡಿಕೊಟ್ಟಿದ್ದಾರೋ ಆ ಬಿಒಎಂದವರು ಏನು ಶಿಫಾರಸು ಮಾಡಿದ್ದಾರೆ ಅದನ್ನು ಕೂಡಲೇ ಈ ಸರ್ಕಾರದವರು ಮಾಡಿಕೊಡಬೇಕು. ವಿವೇಕ ಇಲ್ಲದಂತೆ ವರ್ತಿಸುತ್ತಿದ್ದಾರೋ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳಾಗಲೀ ಅಥವಾ ವೈಸ್ ಚಾನ್ಸಲರ್ ಆಗಲಿ ಅವರು ಕೂಡ ವಿವೇಕ ಇರುವಂಥ ಕೆಲಸ ಮಾಡಬೇಕು. ಈ ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಸುನೀತಾ ವೀರಪ್ಪಗೌಡ (ಬನ್ನೂರು) : ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಕೆಲಸವನ್ನು ಕೊಟ್ಟು 10 ವರ್ಷಗಳಾಗಿದೆ. ಈಗ ಅವರೆಲ್ಲರೂ ಮದುವೆಯನ್ನು ಮಾಡಿಕೊಂಡಿದ್ದಾರೆ. ಇದರಿಂದಾಗಿ ಹೆಣ್ಣುಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಕಳೆದ 10 ವರ್ಷದಿಂದ ಕೆಲಸವನ್ನು ಮಾಡುತ್ತಿದ್ದು ಈಗ ಕೆಲಸವಿಲ್ಲ. ಸಂಬಳವಿಲ್ಲ ಎಂದರೆ ತುಂಬಾ ತೊಂದರೆಯಾಗುತ್ತದೆ. ದಯಮಾಡಿ ಅವರಿಗೆ ಆ ವಿಶ್ವವಿದ್ಯಾನಿಲಯದಲ್ಲಿ 250 ಜನರು ಏನು ಕೆಲಸ ಮಾಡುತ್ತಿದ್ದಾರೋ ಅದು ತುಂಬಾ ಎಸೆನ್‌ಷಿಯಲ್ ವರ್ಕ್ ಆಗಿದ್ದು ಅವರಿಂದ ವಿಶ್ವವಿದ್ಯಾನಿಲಯದವರು ತುಂಬಾ ಉಪಯೋಗವನ್ನು ಪಡೆದುಕೊಂಡು ಅವರಿಗೆ ಈ ರೀತಿಯಾಗಿ ಮಾಡುವುದು ಸರಿಯಲ್ಲ. ಎಲ್ಲಾ ಸದಸ್ಯರುಗಳು ಹೇಳಿರುವ ಹಾಗೆ ದಯಮಾಡಿ ಅವರಿಗೆ ಪರಮನೆಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಇದು ಶೂನ್ಯವೇಳೆಯಲ್ಲಿ ಎತ್ತಿರುವಂತಹ ಸಮಸ್ಯೆಯಾಗಿದೆ. ಮಾನ್ಯ ಶ್ರೀರಾಮರೆಡ್ಡಿಯವರು ಕೇಳಿರುವಂತಹ ಪ್ರಶ್ನೆಗೆ ಸಮಂಜಸವಾಗಿ ಉತ್ತರ ಕೊಡತಕ್ಕಂತಹ ಮಂತ್ರಿಗಳು, ಇಲ್ಲಿರಬೇಕಾಗಿತ್ತು, ಅವರು ಇಲ್ಲ. ಅವರ ಆಬ್‌ಸೆನ್ಸ್‌ನಲ್ಲಿ ಕೇಳತಕ್ಕಂತಹ ವಿಷಯ ಬಹಳ ಗಂಭೀರವಾಗಿರುವುದರಿಂದ ಆ ಪ್ರಶ್ನೆಗೆ ಉತ್ತರವಾಗಿ ಸಮರ್ಪಕವಾಗಿ ಉತ್ತರವನ್ನು ಕೊಟ್ಟು ಆ ಸಮಸ್ಯೆಯನ್ನು ಬಗೆಹರಿಸುವುದಾದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡಬಹುದು, ಹಾಗೂ ಉತ್ತರವನ್ನು ಕೊಡಬಹುದು. ಇಲ್ಲವೆಂದರೆ, ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರು ಮಧ್ಯಾಹ್ನ ಬಂದ ನಂತರ ಉತ್ತರ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೂ ಆಗಬಹುದು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಾವೇನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಅದು ಸರಿಯಾದುದು. ಮಾನ್ಯ ಶ್ರೀರಾಮ ರೆಡ್ಡಿಯವರು ಶೂನ್ಯವೇಳೆಯಲ್ಲಿ ಇವತ್ತು ಬೆಳಿಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಇದು ಕಳೆದ 5 ತಿಂಗಳಿಂದ ಇರುವಂತಹ ಒಂದು ಸಮಸ್ಯೆಯಾಗಿದೆ. ಇವತ್ತು ಸದನದ ಕೊನೆಯ ದಿವಸದಲ್ಲಿದ್ದೇವೆ. ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ತಾವೇನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಇನ್ನಿತರ ಶಾಸಕಮಿತ್ರರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 5 ತಿಂಗಳ ಕಾಲ ವೇತನ ಇಲ್ಲದೆ ಅವರು ಉಪವಾಸ ಬೀಳುವಂತಹ ಪರಿಸ್ಥಿತಿ ಇದು ಬಹಳ ಗಂಭೀರವಾಗಿರುವಂತಹದ್ದು. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನವನ್ನು ಹರಿಸುತ್ತದೆ. ಅವರು ಶೂನ್ಯವೇಳೆಯಲ್ಲಿ ಏನು ಸೂಚನೆಯನ್ನು ಕೊಟ್ಟಿದ್ದಾರೆ. ಪರ್ಟಿಕ್ಯುಲರ್ ಆಗಿ ಆ ವಿಷಯ ಇರಲಿಲ್ಲ. ಹೀಗಾಗಿ ಮಾಹಿತಿಯನ್ನು ತಕ್ಷಣ ತರಿಸುವುದಕ್ಕೆ ಆಗಲಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಹಾಗೂ ಶಿಕ್ಷಣ ಸಚಿವರ ಜೊತೆಯಲ್ಲಿ ಕೂಡ ಮಾತನಾಡುತ್ತೇನೆ ಇದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳುವ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರು ಹೇಳಿದ ಹಾಗೆ, ಇವತ್ತು ಅದರ ಬಗ್ಗೆ ಆದೇಶ ಹೋಗಬೇಕು. ಅವರಿಗೆ 5 ತಿಂಗಳ ಕಾಲ ಸಂಬಳವಿಲ್ಲ. ಹೆಂಡತಿ ಮತ್ತು ಮಕ್ಕಳು ಬೀದಿಗೆ ಬಂದಿದ್ದಾರೆ. ಅಲ್ಲಿ ಕೆಲಸ ಮಾಡುವಂತಹ ಹೆಣ್ಣು ಮಕ್ಕಳು ಇದ್ದಾರೆ. ಇದರ ಬಗ್ಗೆ ತೀರ್ಮಾನ ಮಾಡಿ ಸಂಬಳ ಕೊಟ್ಟು 5 ತಿಂಗಳಾಗಿದೆ. ನೀವೇನು ಹಣವನ್ನು ಕೊಡಬೇಕಾಗಿಲ್ಲ. ನಮ್ಮ ಹತ್ತಿರ ಹಣವಿದೆ. ನಾವು ಹಣವನ್ನು ಕೊಡುತ್ತೇವೆಂದು ಹೇಳಿದರೆ, ನಮ್ಮ ಹಣವನ್ನು ಕೊಡುವುದಕ್ಕೆ ಯೂನಿವರ್ಸಿಟಿಯ ಹಣವನ್ನು ಕೊಡುವುದರ ಬಗ್ಗೆ ನೀವು ತಗಾದೆಯನ್ನು ಹಾಕಿಕೊಂಡು ಕುಳಿತುಕೊಂಡರೆ ಹೇಗೇ? ಇಲ್ಲಿ ಮಾನವೀಯತೆ ಇರಬೇಕಲ್ಲವೇ? ಅಲ್ಲಿ 5 ತಿಂಗಳ ಹೆಂಗಸರು ಮತ್ತು ಮಕ್ಕಳು ಬೀದಿಗೆ ಬಿದ್ದಿದ್ದಾರೆ. ಅವರೆಲ್ಲರೂ ಉಪವಾಸದಿಂದ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಶಾಸಕರೆಲ್ಲರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಇದರ ಬಗ್ಗೆ ತಕ್ಷಣವೇ ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಆಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ಅವರು ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಇದನ್ನು ಶೂನ್ಯವೇಳೆಯಲ್ಲಿ ಏತಕ್ಕಾಗಿ ಹೇಳಿದ್ದೇನೆಂದರೆ, ನಿಜವಾಗಲೂ ಹೇಳಬೇಕಾದರೆ, ... ತಾಳ್ಮೆಯಿಂದ ನಾವು 5 ತಿಂಗಳಿಂದ ಇದ್ದೇವೆ. ಅಲ್ಲಿ ನಡೆಯುತ್ತಿರುವಂತಹ ಅವ್ಯವಹಾರಗಳು.....

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಒಂದು ನಿಮಿಷ.

ಶ್ರೀ ಜಗದೀಶ್ ಶೆಟ್ಟರ್: ಇದನ್ನು ಬೇರೆ ರೂಪದಲ್ಲಾದರೂ ತರಬಹುದಾಗಿತ್ತಲ್ಲವೇ? ಮತ್ತೊಂದು ರೂಪದಲ್ಲಾದರೂ ಇದನ್ನು ತರಬಹುದಾಗಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಜಗದೀಶ್ ಶೆಟ್ಟರ್‌ರವರೆ ಒಂದು ನಿಮಿಷ. ನನ್ನ ಮಾತನ್ನು ಕೇಳಿ, ಆ ವಿಶ್ವವಿದ್ಯಾನಿಲಯದ ಘನತೆ ಮತ್ತು ಗೌರವಗಳಿಗೆ ಧಕ್ಕೆ ಬರಬಾರದು. ಹತ್ತಾರು ಸಾವಿರ ವಿದ್ಯಾರ್ಥಿಗಳ ಮೇಲೆ ಇದರಿಂದಾಗಿ ಅಸೆಂಬ್ಲಿಯಲ್ಲಿ ಚರ್ಚೆಯಾದರೆ ಪರಿಣಾಮ ಬೀರುತ್ತದೆ. ಇದು ಬಹಿರಂಗವಾದರೆ ಯೂನಿವರ್ಸಿಟಿ ಘನತೆ ಮತ್ತು ಗೌರವ ಹೋಗುತ್ತದೆ. 5 ತಿಂಗಳು ಬಹಳ ತಾಳ್ಮೆಯಿಂದ ನಾವು ತಡೆದುಕೊಂಡಿದ್ದೇವೆ. ಸ್ಯಾಡಿಷ್ ಮನೋಭಾವ ಇರುವಂತಹ ಅಧಿಕಾರಿಗಳು ಮಾಡುತ್ತಿರುವಂತಹ ಕುತಂತ್ರ ಇದು. ಅವರೆಲ್ಲರೂ ಸ್ಯಾಡಿಷ್‌ನವರು. ಅವರಿಗೆ ಮನುಷ್ಯತ್ವವೇ ಇಲ್ಲ. ನಾವು ಹಣವನ್ನು ಕೊಡುತ್ತೇವೆಂದು ಹೇಳಿದರೆ, ಇವರಿಗೇನು ಕಷ್ಟ? ಇದಕ್ಕೆ ಸರ್ಕಾರ ಹಣ ಕೊಡಬೇಕಾ? ಯೂನಿವರ್ಸಿಟಿಯಲ್ಲಿ 40 ಕೋಟಿ ರೂಪಾಯಿಗಳ ಎಫ್.ಡಿ. ಇದೆ. ಅವರೆಲ್ಲರೂ ಅದರಿಂದ ಬರುವ ಬಡ್ಡಿಯಲ್ಲಿ ಕೊಡಬಹುದು. ಅವರೆಲ್ಲರೂ ಕಷ್ಟಪಟ್ಟು ದುಡಿಯುತ್ತಾರೆ. ಅವರಿಂದಾಗಿಯೇ ಯೂನಿವರ್ಸಿಟಿಯು ನಡೆಯುತ್ತಿರುವುದು. ವೈಸ್ ಚಾನ್ಸಲರ್ ಬೋರ್ಡ್ ಆಫ್ ಯೂನಿವರ್ಸಿಟಿಯವರಲ್ಲ ಯೂನಿವರ್ಸಿಟಿ ನಡೆಸುವುದು. 10 ಸಾವಿರ ವಿದ್ಯಾರ್ಥಿಗಳಿಗೆ ಪಾಠ ಕಳುಹಿಸಬೇಕು. ಇನ್ನು ಪೋಸ್ಟ್ ಮಾಡಿಲ್ಲ. ಇನ್ನು ಲೆಸೆನ್ಸ್ ತಯಾರು ಮಾಡಿರುವುದಿಲ್ಲ. ಸಿಲಬಸ್‌ನ್ನು ಬರೆಸಿರುವುದಿಲ್ಲ. ಈ ರೀತಿಯಾಗಿ ಸ್ಯಾಡಿಷ್ ಅಧಿಕಾರಿಗಳನ್ನು ಇಟ್ಟುಕೊಂಡು ಈ ರೀತಿಯಾಗಿ ನಡೆಸುವುದಾದರೆ ವಿಶ್ವವಿದ್ಯಾನಿಲಯದ ಗತಿ ಏನು? ಅದರಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಚರ್ಚೆಯಾದರೆ ವಿಶ್ವವಿದ್ಯಾನಿಲಯದ ಘನತೆ ಮತ್ತು ಗೌರವ ಹೋಗುತ್ತದೆ. ಅದಕ್ಕೋಸ್ಕರ 5 ತಿಂಗಳಿಂದ ಬಾಯಿಮುಚ್ಚಿಕೊಂಡು ಕುಳಿತುಕೊಂಡಿದ್ದೇವೆ. ಆದ್ದರಿಂದ ದಯವಿಟ್ಟು ನಾನು ತಮ್ಮಲ್ಲಿ ವಿನಂತಿಸುತ್ತಿದ್ದೇನೆ. ಆ ಸಮಸ್ಯೆಯು ಇವತ್ತೆ ತಕ್ಷಣ ಪರಿಹಾರವಾಗಬೇಕು. ಏನಿಲ್ಲಾ, ಬಿಒಎಂ ತೀರ್ಮಾನವನ್ನು ಜಾರಿ ಮಾಡಿ ಎಂದು ಒಂದು ಆದೇಶವನ್ನು ಕಳುಹಿಸಿಬಿಡಿ ಸಾಕು. ನೀವು ಬೇರೆ ಏನು ಮಾಡಬೇಕಾಗಿಲ್ಲ. ಬಿಒಎಂ ತೀರ್ಮಾನ ಜಾರಿ ಮಾಡಿ ಎಂದು ವೈಸ್ ಚಾನ್ಸಲರ್‌ರವರಿಗೆ ಒಂದು ಆದೇಶವನ್ನು

ಕಳುಹಿಸಿ ನೀವು. ನೀವು ಬೇರೆ ಏನು ಮಾಡಬೇಕಾಗಿಲ್ಲ. ಅವರು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ಪುಟ್ಟೇಗೌಡರು ಹೇಳಿದರು. ಅಲ್ಲಿ ಸ್ಟ್ರೈಕ್ ಮಾಡುವ ಒಬ್ಬ ಎಂಪ್ಲಾಯಿ.....

ಡಾ: ಕೆ. ಅನ್ನದಾನಿ : ವೈಸ್‌ಚಾನ್ಸಲರ್‌ರವರನ್ನು ಬದಲಾವಣೆ ಮಾಡಿಬಿಡಿ. ಇಲ್ಲವಾದರೆ ಸಮಸ್ಯೆಯು ಬಗೆಹರಿಯುವುದಿಲ್ಲ. ವೈಸ್ ಚಾನ್ಸಲರ್‌ರವರಿಂದ ಇಂತಹ ಸಮಸ್ಯೆ ಉದ್ಭವವಾಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವೈಸ್‌ಚಾನ್ಸಲರ್‌ರವರಿಂದಲೇ ಈ ಸಮಸ್ಯೆ ಆಗಿರುವುದು. ಅವರಿಗೆ ಸಪೋರ್ಟ್ ಮಾಡುವಂತಹ ಅಧಿಕಾರಿಗಳು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಶಿಕ್ಷಣ ಸಚಿವರ ಜೊತೆಯಲ್ಲಿ ಮಾತನಾಡಿ ತಕ್ಷಣವೇ ಇವತ್ತು ಸಾಯಂಕಾಲದೊಳಗಾಗಿ ಇದರ ಬಗ್ಗೆ ನಿರ್ಣಯವನ್ನು ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಇವತ್ತು ಸಾಯಂಕಾಲದೊಳಗೆ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವತ್ತೇ ಆಗಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಸಾಯಂಕಾಲದೊಳಗಾಗಿ ನಿರ್ಣಯ ತೆಗೆದುಕೊಂಡು ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವೇನು ಮಾಡಬೇಕಾಗಿಲ್ಲ. ಬಿಒಎಂ ತೀರ್ಮಾನವನ್ನು ಜಾರಿಮಾಡಿದೆಯೆಂದು ಒಂದು ಆದೇಶವನ್ನು ಹೊರಡಿಸಿ.

ಶ್ರೀ ಜಗದೀಶ್‌ಶೆಟ್ಟರ್ : ಇವತ್ತು ಸಾಯಂಕಾಲದೊಳಗಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಶಿವಕುಮಾರ್‌ರವರು ಏನು ಕೇಳುತ್ತಾರೆ ನೋಡೋಣ. ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇವತ್ತು ಸಾಯಂಕಾಲದೊಳಗಡೆ ಸಂಬಂಧಪಟ್ಟ ಇಲಾಖಾಧಿಕಾರಿಗಳ ಹತ್ತಿರ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಮತ್ತೆ ಅದನ್ನು ಏತಕ್ಕಾಗಿ ಹೇಳುತ್ತೀರಿ. ಮಾನ್ಯ ಶಿವಕುಮಾರ್‌ರವರೆ ತಾವು ಮಾತನಾಡಿ.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು : ಮಾನ್ಯ ಜೀವಿಜಯರವರೆ, ಒಂದು ನಿಮಿಷ ತಾಳಿ.

ಬಿ.ಎ. ಜೀವಿಜಯ : ಚರ್ಚೆ ಇದೆ. ಅದಕ್ಕೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡಬೇಕು.

ಉಪಾಧ್ಯಕ್ಷರು : ಒಂದು ನಿಮಿಷ ತಮ್ಮನ್ನು ಕರೆಯುತ್ತೇನೆ.

(ಇ) **ಸಾತನೂರು ಕ್ಷೇತ್ರದ ಅಭಿವೃದ್ಧಿ ಹಾಗೂ ರಸ್ತೆಗಳ ರಿಪೇರಿ ಕೆಲಸ ಎರಡು ವರ್ಷದಿಂದ ಆಗದಿರುವ ಬಗ್ಗೆ.**

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೆ, ಅಧಿವೇಶನ ಪ್ರಾರಂಭವಾದಾಗಿನಿಂದ ನಾನು ಇಲ್ಲಿಯವರೆವಿಗೂ ನನ್ನ ಕ್ಷೇತ್ರದ ರಸ್ತೆಗಳ ಬಗ್ಗೆ ಕಾಲಿಂಗ್